ಮಂಗಳೂರು ವಿಶ್ವವಿದ್ಯಾನಿಲಯ

ಕುಲಸಚಿವರ ಕಚೇರಿ
ಸಂಖ್ಯೆ: ಎಂಯು/ಎಸಿಸಿ/ಸಿ.ಆರ್- 15/2021-22/ಎ8
ಮಂಗಳಗಂಗೋತ್ರಿ - 574 199
ದಿನಾಂಕ: 10/04/2023

ಸುತ್ತೋಲೆ

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಪದವಿ ಕಾರ್ಯಕ್ರಮಗಳ ಚತುರ್ಥ ಸೆಮಿಸ್ಟರ್‌ನ ಮುಕ್ತ ಆಯ್ಕೆ ಕೋರ್ಸುಗಳ ಬಗ್ಗೆ.

ಉಲ್ಲೇಖ: 1) ಈ ಕಚೇರಿ ಸುತ್ತೋಲೆ ಸಂಖ್ಯೆ: ಮಂವಿ/ಶೈಕ್ಷಣಿಕ/ಸಿಆರ್-34/2020-2021/ಎ2, ದಿನಾಂಕ 18/10/2022
2) ಈ ಕಛೇರಿ ಸುತ್ತೋಲೆ ಸಂ:ಎಂಯು/ಎಸಿಸಿ/ಸಿ ಆರ್ 53/2021-22/ಎ8 ದಿ: 17.12.2022
3) ಈ ಕಚೇರಿ ಪತ್ರ ಸಂ: MU/ACC/CR-34/NEP/2020-21/A2, ದಿನಾಂಕ 06.02.2023

~~~~~~~~~

ಉಲ್ಲೇಖ (1)ರ ಸುತ್ತೋಲೆಗೆ ಮುಂದುವರಿಕೆಯಾಗಿ, ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಪದವಿ ಕಾರ್ಯಕ್ರಮಗಳ ತೃತೀಯ ಸೆಮಿಸ್ಟರ್‌ನಲ್ಲಿ ಭಾರತ ಸಂವಿಧಾನವನ್ನು ಅಭ್ಯಾಸ ಮಾಡಿ ಚತುರ್ಥ ಸೆಮಿಸ್ಟರ್‌ನಲ್ಲಿ ಮುಕ್ತ ಆಯ್ಕೆ ಕೋರ್ಸನ್ನು ಆಯ್ಕೆ ಮಾಡುವ ವಿದ್ಯಾರ್ಥಿಗಳು ಚತುರ್ಥ ಸೆಮಿಸ್ಟರ್ ನಲ್ಲಿ ತೃತೀಯ ಸೆಮಿಸ್ಟರ್ ಗೆ ನಿಗದಿಪಡಿಸಿರುವ ಮುಕ್ತ ಆಯ್ಕೆ ಕೋರ್ಸಿನ ಪಠ್ಯಕ್ರಮವನ್ನೇ ಅಭ್ಯಾಸಮಾಡಬೇಕಾಗಿ ಈ ಮೂಲಕ ಸ್ಪಷ್ಟ ಪಡಿಸಲಾಗಿದೆ. ಉಲ್ಲೇಖ (3) ರಲ್ಲಿ ಪ್ರಕಟಿಸಲಾಗಿರುವ ಶೈಕ್ಷಣಿಕ ವರ್ಷ 2022-23ನೇ ಸಾಲಿಗೆ ಮಾತ್ರ ಅನ್ವಯವಾಗುವ ಪದವಿ ಮಟ್ಟದ ಕಾರ್ಯಕ್ರಮಗಳ ಪರಿಷ್ಕೃತ Structureಗಳನ್ನೇ ಈ ಸಾಲಿಗೆ ಕಡ್ಡಾಯವಾಗಿ ಅನುಸರಿಸಲು ತಿಳಿಸಲಾಗಿದೆ.

ಇದಲ್ಲದೆ, ಉಲ್ಲೇಖ (2) ರ ಸುತ್ತೋಲೆ ಯಲ್ಲಿ ಈಗಾಗಲೇ ತಿಳಿಸಿದಂತೆ ದ್ವಿತೀಯ ಸೆಮಿಸ್ಟರ್ ನಲ್ಲಿ ಪರಿಸರ ಅಧ್ಯಯನ ಕೋರ್ಸನ್ನು (Ability Enhancement Compulsory Course) ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ 2ಕ್ರೆಡಿಟ್ ಗಳ /50 ಅಂಕಗಳ ಪರಿಸರ ಅಧ್ಯಯನ ಕೋರ್ಸಿನ ಪಠ್ಯಕ್ರಮವನ್ನೇ ಈ ಶೈಕ್ಷಣಿಕ ಸಾಲಿಗೆ ಬೋಧಿಸಲು ತಿಳಿಸಲಾಗಿದೆ.

ಮುಂದುವರಿದು, ಪದವಿ ಕಾರ್ಯಕ್ರಮಗಳ ವಿವಿಧ ಕೋರ್ಸುಗಳನ್ನು ಬೋಧಿಸುವ ಉಪನ್ಯಾಸಕರ ಬೋಧನಾರ್ಹತೆ ಬಗ್ಗೆ ವಿಶ್ವವಿದ್ಯಾನಿಲಯದಿಂದ ಹೊರಡಿಸಲಾಗಿರುವ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರುವ ಅರ್ಹ ಉಪನ್ಯಾಸಕರಿಂದಲೇ ಸದರಿ ಕೋರ್ಸುಗಳನ್ನು ಕಡ್ಡಾಯವಾಗಿ ಬೋಧಿಸಲು ಕ್ರಮಕೈಗೊಳ್ಳಬೇಕಾಗಿ ತಿಳಿಸಲಾಗಿದೆ.

ಕುಲಸಚಿವರು

ರಿಗೆ:

1. ಪ್ರಾಂಶುಪಾಲರು, ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜುಗಳು.
2. ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ
3. ಪ್ರೊ. ಜಯರಾಜ್ ಅಮೀನ್, ಡೀನರು, ಕಲಾ ನಿಕಾಯ, ಹಾಗೂ ಅಧ್ಯಕ್ಷರು,ಸ್ನಾತಕೋತ್ತರ ರಾಜ್ಯಶಾಸ್ತ್ರವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ , ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
5. ಪ್ರೊ. ಶಶಿರೇಖಾ ಎಚ್.ಎಲ್, UUCMS, ನಿರ್ದೇಶಕರು, ಗಣಕಯಂತ್ರ ಕೇಂದ್ರ, ಮಂಗಳೂರು, ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ
6. ನಿರ್ದೇಶಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
~~~~~~~~~